doc-535
T-P-2

Reg No B G 155 • 29 — 8 —72

55th Year of Publication ‘Satyavadi’ daily, Mysore 4

In State - The First
Golden Jubilee Celebrated Paper
★
News, Views, Dharmic Moral Ethical Matters

ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪರಮೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮತ ಸ್ವಾತಂತ್ರ ಮಸೂದೆಗೆ ಕ್ರೈಸ್ತಿಯನರ ವಿರೋಧ

ಭವ್ಯ ಕರ್ನಾಟಕ
(ಸಾಂಗತ್ಯ)

★

ಮೈಸೂರಾಂತರ್ಗತ ಕನ್ನಡನಾಡದು
ಭವ್ಯ “ ಕರ್ನಾಟಕ ” ಎಂಬ
ಲೇಸಾದ ಹೆಸರಾಂತು ಸಾರ್ಥ್ಯ ಹೊಂದಿತು
ನಾಮದೊಳಿಪೆ ಶಕ್ತಿ ಬಿಂಬ ॥ 1 ॥

ಕರ್ನಾಟಕವೆನೆ ಅಮರಗಂಭೀರತೆ
ನಿನದಿಸುವುದು ಕರ್ಣದಲ್ಲಿ
ವರ್ಣ “ ಕ ” ಕಾರವು ಆದಿಅಂತ್ಯಗಳಲಿ
ಘೂರ್ಣಿಸಿ ಶೋಭಿಪುದಲ್ಲಿ ॥ 2 ॥

ಕನ್ನಡನಾಡಿಗೆ ಸೇರ್ದ ಕಾವರಗೋಡ
ಸ್ವಾರ್ಥದಿ ಪಡೆದ ಕೇರಳವು
ತನ್ನ ತಪ್ಪನು ತಿದ್ದಿ, ಮಹಾಜನದ ವರದಿ
ಯೋಲ್
ಬಿಟ್ಟುಕೊಡಲಿ ಆ ನೆಲವನು ॥ 3 ॥

ಬೆಳಗಾವಿ ಕನ್ನಡನೆಲವೆನೆ, ಮಹಾರಾಷ್ಟ್ರ
ಕೇತಕದರ ಮೇಲೆ ಮೋಹ?
ಸಲಿಸೀಗ ಮನ್ನಣೆ ಮಹಾಜನ ವರದಿಗೆ
ಬಿಡಲಿ ಆಕ್ರಮಣದ ದಾಹ ॥ 4 ॥

ಮೈಸೂರಾಂತರ್ಗತ ಭಾರತೆಯಂಗ ಕರ್ನಾಟಕ
ವದು ವಿಶ್ವಪ್ರೇಮವ ಧರಿಸಿ
ಧರೆಗೆ ಸದ್ಧರ್ಮ, ಸೌಭಾಗ್ಯಗಳ ಸಾರುತ
ಮುನ್ನಡೆಯಲಿ ಸೊಗವೆರಸಿ ॥ 5 ॥

— ಜಿ. ಎನ್. ಲಕ್ಷ್ಮಣ ಪೈ
ಪುತ್ತೂರು

★

ಚಳವಳಿಗಾರರ ಒತ್ತಾಯ

ಮೈಸೂರು— ಅವಶ್ಯಕ ಪದಾರ್ಥಗಳ ಏರುತ್ತಿರುವ ಬೆಲೆಯನ್ನು ಕೂಡಲೇ ನಿಲ್ಲಿಸುವಂತೆ ಕನ್ನಡ ಚಳವಳಿಗಾರರು ಸರಕಾರವನ್ನು ಒತ್ತಾಯ ಮಾಡಿದ್ದಾರೆ

★

ಮತಾಂತರ ಪ್ರತಿಬಂಧಕ

ಅಹಮದಾಬಾದು— ಒಂದು ಮತದಿಂದ ಮತ್ತೊಂದು ಮತಕ್ಕೆ ಬಲಾತ್ಕಾರದಿಂದಾಗಲೀ ಮೋಸರೀತಿಯಿಂದಾಗಲೀ ಪುಸಲಾವಣೆಯಿಂದಾಗಲಿ ಮತಾಂತರಗೊಳಿಸುವದನ್ನು ತಡೆಗಟ್ಟಲು ತರಲಾಗಿರುವ ಗುಜರಾತು ಮತ ಸ್ವಾತಂತ್ರ್ಯ ಮಸೂದೆಯನ್ನು, 5000 ಕ್ರೈಸ್ತಿಯನ್ನರು ಸಭೆಯಲ್ಲಿ ವಿರೋಧಿಸಿ, ಈ ಮಸೂದೆಯನ್ನು ಬಿಟ್ಟು ಬಿಡಬೇಕೆಂದು ಒತ್ತಾಯಮಾಡಿರುವರು.

★

ಪಾನನಿರೋಧ

ನವದೆಹಲಿ— ರಾಜ್ಯಗಳಲ್ಲಿ ಪಾನನಿರೋಧವು ರಾಜ್ಯಾಂಗದಲ್ಲಿ ನೇರ ಸೂಚನೆಯಾಗಿದ್ದರೂ, ಭಾರತದ ಹೆಚ್ಚು ಭಾಗಗಳಲ್ಲಿ, ಸ್ವಾತಂತ್ರ್ಯ ದೊರೆತ ಕಾಲಕ್ಕಿಂತ ಈ ಕುಡಿತ ಹೆಚ್ಚಿದೆ— ಮಹಾತ್ಮಾ ಗಾಂಧಿಯ ಜನ್ಮಸ್ಥಳವಾದ ಗುಜರಾತು ಮಾತ್ರ ಪಾನನಿರೋಧದ ದುರ್ಗವಾಗಿದೆ.

●

ವಾರಕ್ಕೆ 5 ದಿನಗಳ ಸ್ಕೂಲು

ಪಶ್ಚಿಮ ಜರ್ಮನಿಯಲ್ಲಿ ವಾರಕ್ಕೆ 6 ದಿನಗಳ ಸ್ಕೂಲುಗಳನ್ನು 5ದಿನಗಳಿಗೆ ಇಳಿಸಬೇಕೆಂದು ಅಲ್ಲಿಯ ಡಾಕ್ಟರುಗಳೂ, ದಂತ ವೈದ್ಯರೂ, ಔಷಧಿ ವಿಕ್ರಯ ಪ್ರೆಸ್ ಬೂರೋರವರೂ ಮನವಿ ಮಾಡಿದ್ದಾರೆ: ಪಾಠ ಕಾರ್ಯಕ್ರಮ ಕಡಮೆ ಮಾಡುವ ಬಗ್ಗೆ ವೈಜ್ಞಾನಿಕವಾದ ಸಾಕ್ಷ್ಯವನ್ನು ತೋರಿಸಲಾಗಿದೆಯಂತೆ !

★

ಭಾರತೀಯರಿಗೆ ಪ್ರಶಸ್ತಿ

ಕೊಲಂಬೊ— ಭಾರತ ಪ್ರವಾಸಿ ಟೆನೀಸು ಆಟಗಾರರು ಸಿಲೋನಿನ ಟೆನೀಸು ಪಂಥದಲ್ಲಿ 5 ಪ್ರಶಸ್ತಿಗಳಿಸಿದರು.

●

ಕೆಲಸ ಹುಡುಕುವವರು

ನವದೆಹಲಿ— 1970 ನೇ ಮಾರ್ಚಿಗಲ್ಲಿದ್ದ 34.5 ಲಕ್ಷ ಕೆಲಸ ಹುಡುಕುವವರ ಸಂಖ್ಯೆ 1971 ನೇ ಮಾರ್ಚಿಯಲ್ಲಿ 42.2 ಲಕ್ಷಕ್ಕೆ ಏರಿತು ; ಶೇಕಡ 22.2 ಹೆಚ್ಚಿತು !

★

ಕೇಂದ್ರಕ್ಕೆ ಪಾನನಿರೋಧದ ಆಸಕ್ತಿ

ನವದೆಹಲಿ— ಕೇಂದ್ರವು ಪಾನನಿರೋಧ ನೀತಿಯನ್ನು ಮುಕ್ತಾಯಗೊಳಿಸಲು ಪ್ರಯತ್ನಿಸುತ್ತಿಲ್ಲವೆಂದೂ, ಪಾನನಿರೋಧ ಪರಿಣಾಮಕಾರಿಯಾಗಿ ಜಾರಿಯಾಗುವ ಬಗ್ಗೆ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸುವುದೆಂದೂ ಲೋಕಸಭೆಯಲ್ಲಿ ತಿಳಿಸಲಾಯ್ತು

○

ಬಸ್ ಕಂಡಕ್ಟರ್‌ಗೆ ಮೆಚ್ಚಿಗೆ ಬಹುಮಾನ

ಕಲ್ಬುರ್ಗಿ— ಸುಮಾರು 34 ತೊಲಾ ಬಂಗಾರದವರೆಗೆ ಆಭರಣಗಳನ್ನು ಹೊಂದಿದ್ದ ಪ್ರವಾಸಿಕರೊಬ್ಬರು ಬಿಟ್ಟುಹೋದ ಟ್ರಂಕನ್ನು ಪ್ರಾಮಾಣಿಕತೆಯಿಂದ ಹಿಂದಿರುಗಿಸಿದ ಸಲುವಾಗಿ ಶ್ರೀ ಮಹಮದ್ ಇಸ್ಮೈಯಿಲ್ ಎಂಬ ಕಂಡಕ್ಟರಿಗೆ ಕಲ್ಬುರ್ಗಿ ಡಿವಿಜ಼ನ್ ಎಂ ಎಸ್ ಆಂ ಟಿ ಸಿ ಯ ಜನರಲ್ ಮ್ಯಾನೇಜರವರು ರೂ. 50 ಮೆಚ್ಚಿ ಬಹುಮಾನ ನೀಡಿರುವರು.

○ !

ವಿಶ್ವದಲ್ಲಿ ದಿನಪತ್ರಿಕೆಗಳು

ನವದೆಹಲಿ— ಪ್ರಪಕ್ಷ 4 ದಿನಗಳು ಪ್ರಕಟಿಸಲ್ಪಡುವ ಪತ್ರಿಕೆಯೂ ದಿನಪತ್ರಿಕೆ ಎಂಬ ಆಧಾರದ ಮೇಲೆ ಯುನೆಸ್ಕೋ 1969 ರ ಅಂಕಿಅಂಶ ಪುಸ್ತಕದಲ್ಲಿ, ವಿಶ್ವದಲ್ಲಿ ಒಟ್ಟು 7680 ದಿನಪತ್ರಿಕೆಗಳಿದ್ದು ಅವುಗಳ ಒಟ್ಟು ಪ್ರಚಾರ 365 ಮಿಲಿಯ ಎಂದು ತಿಳಿಸಲಾಗಿದೆ.

★

ಮಂತ್ರಿಗಳವರ ಸ್ತುತ್ಯ ಕಾರ್ಯ

ಬೆಂಗಳೂರು— ರಾಜ್ಯದ 21 ಮಂತ್ರಿಗಳಿಗೆ ಅಭಿನವ ಪರಿಹಾರ ಕ್ರಮದ ಮೇಲ್ವಿಚಾರಣೆಗೆ ಬೇರೆಬೇರೆ ಜಿಲ್ಲೆಗಳನ್ನು ನಿಗದಿ ಮಾಡಲಾಗಿದೆ — ಮುಖ್ಯ ಮಂತ್ರಿಗಳವರು ಸಾಧ್ಯವಾದಷ್ಟು ಸಾರಿ ರಾಜ್ಯದಲ್ಲೆಲ್ಲಾ ಸುತ್ತುತ್ತಾ, ಎಲ್ಲ ವಿಷಯಗಳನ್ನೂ ಅಭಿವೃದ್ಧಿಗಳನ್ನೂ ಪರಿಶೀಲಿಸುತ್ತಿರುವರು.

★

ರಿಟ್ ಅರ್ಜಿಗೆ ರೂ. 100

ಬೆಂಗಳೂರು— ರಿಟ್ ಅರ್ಜಿಗಳಿಗೆ ಈಗಿರುವ ಕೋರ್ಟು ಫಿ ಸ್ಟ್ಯಾಂಪನ್ನು ಈಗಿರುವ ರೂ 25 ರಿಂದ ರೂ 100 ಕ್ಕೆ ಹೆಚ್ಚಿಸಲು ಮಂತ್ರಿಮಂಡಲ ನಿರ್ಧರಿಸಿತೆಂದೂ, ಬಡವರಿಗೆ ಉಚಿತ ನ್ಯಾಯಾಂಗ ನೆರವು ದೊರಕಿಸುವ ವಿಷಯ ಪರ್ಯಾಲೋಚಿಸಲ್ಪಡುತ್ತಿದೆಯೆಂದೂ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಹೇಳಿದರು.

★

ರುದ್ರಾಭಿಷೇಕಕ್ಕೆ ಧನಸಹಾಯ

ವಿಶಾಖಪಟ್ಟಣ— ಅನಾವೃಷ್ಟಿ ನೀಗಲು ರುದ್ರಾಭಿಷೇಕ ಮೂಲಕ ದೇವರ ಅನುಗ್ರಹ ದೊರೆಯುವಂತೆ ಶ್ರಮಿಸುವವರಿಗೆ ಧನಸಹಾಯವನ್ನು ಸರಕಾರ ನೀಡುವದೆಂದೂ ಜಿಲ್ಲಾ ಕಲೆಕ್ಟರ್ ಶ್ರೀ ಅಚಂತ್ ರವರು ಹೇಳಿರುವರು.

●

ನಿಧನ

ಬೆಂಗಳೂರು— ಮಾಜಿ ದಿವಾನ್ ಶ್ರೀ ಎಸ್. ಮಾಧವರಾಯರು ತಮ್ಮ 85 ನೇ ವಯಸ್ಸಿನಲ್ಲಿ ನಿನ್ನೆ ನಿಧನರಾದರು.

★

ನವದೆಹಲಿ— ಜನರಲ್ ಇನ್ಷೂರೆನ್ಸ್ (ರಾಷ್ಟ್ರೀಕರಣ) ಮಸೂದೆ, ಲೋಕಸಭೆಯಲ್ಲಿ ಆಡಳಿತ ಪಕ್ಷದವರು ಮಾತ್ರ ವಿದ್ದು ಮಂಜೂರಾಯಿತು — ವಿರೋಧಿಗಳೆಲ್ಲರೂ ಸಭಾತ್ಯಾಗ ಮಾಡಿದರು.

ದಿವ್ಯವಾಣಿ

ಕಾಯಿದೆಯು ಬಡವನನ್ನು ಹಿಂಡುತ್ತದೆ ; ಧನಿಕ ಕಾಯಿದೆಯನ್ನು ಖರೀದಿಸುತ್ತಾನೆ. — ಗೋಲ್ಡ್‌ಸ್ಮಿತ್

ಹೊಸ ಜಾತಿಯ ಹಣ್ಣು ತರಕಾರಿ

ಜಗತ್ತಿನಲ್ಲಿ ಒಂದು ಸಾವಿರಕ್ಕೂ ಹೆಚ್ಚಿನ ಬಗ್ಗೆಯ ದ್ರಾಕ್ಷಿಹಣ್ಣುಗಳಿವೆ : ಸುಮಾರು 12000 ಬಗೆಯ ತರಕಾರಿಗಳು ಈಗ ಬೆಳೆಯಲಾಗುತ್ತಿದೆ ಎಂಬುದನ್ನು ನೀವು ನಂಬುವಿರಾ ? ಅಷ್ಟೆ ಏಕೆ, 1000 ಬಗೆಯ ದ್ರಾಕ್ಷಿಹಣ್ಣುಗಳನ್ನು ಸಂಗ್ರಹಿಸಿಟ್ಟಿರುವ ಸಂಸ್ಥೆಯೊಂದು ಬೆಂಗಳೂರಿನಲ್ಲಿದೆ ಎಂದರೆ ನಿಮಗೆ ನಂಬಿಕೆ ಬರುವುದೆ? ಆದರೆ ಅದು ನಿಜ

ಬೆಂಗಳೂರಿಗೆ 15 ಮೈಲಿ ಸಮೀಪದಲ್ಲಿ ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ಹೆಸರುಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು ಜಗತ್ತಿನಾದ್ಯಂತ ದೊರೆಯುವ ಎಲ್ಲಾ ಜಾತಿಯ ಹಣ್ಣುಗಳು, ತರಕಾರಿ, ಹೂ ಮತ್ತು ಸಂಬಾರು ವಸ್ತುಗಳನ್ನು ಸಂಗ್ರಹಿಸಿದೆ ; ಸಂಗ್ರಹಣ ಕಾರ್ಯದೊಂದಿಗೆ ಹಣ್ಣು, ತರಕಾರಿ ಇತ್ಯಾದಿಗಳನ್ನು ಹೊಸ ವಿಧಾನ ಮೂಲಕ ಬೆಳೆಯುವ ಬಗ್ಗೆಯೂ ಸಂಶೋಧನೆಯನ್ನೂ ನಡೆಸುತ್ತಿದೆ.

ವುಡ್‌ಲ್ಯಾಂಡ್ 25 8 72 ರಿಂದ ಅಮೋಘ ಪ್ರಾರಂಭ

ರಾಜೇಂದ್ರ ಕುಮಾರ್ ಅರ್ಪಿಸುವ

ಟಾಂಗೇವಾಲಾ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ — ರಾಜೇಂದ್ರ ಕುಮಾರ್ ಮುಮ್ತಾಜ್ ಐ. ಎಸ್. ಜೋಹರ್

ಸಂಗೀತ – ನೌಷದ್ ನಿರ್ದೇಶನ – ನರೇಶ್ ಕುಮಾರ್

ಬೆಳಗಿನ ಪ್ರದರ್ಶನ 10-30 ಕ್ಕೆ ಗುರು ದಕ್ಷಿಣೆ

ಅಪೆರಾ 3 ನೇ ವಾರ

— ಅತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತರ್

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ—ರಾಜ್ ಕುಮಾರ್, ಹೇಮಾಮಾಲಿನಿ, ರಾಖಿ, ವಿನೋದ್ ಮೆಹ್ರಾ

Contribute Liberally

to the National Defence Fund

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

★/

ಆನೆ - ಹುಡುಗ

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

Potect the Cow

Help The Gorakshana

— Humanitarian Propoganda Monthly ....

SHAKTI SUDHA

A Superb Tonic